ಸಂಳ್ಳಿ ಜಾತಿ ಪತ್ರ ಪಡೆದು ಸರ್ಕಾರಿ ಸೇವೆಯಲ್ಲಿ ಮುಂಬಡ್ತಿ ಪಡೆದ ಪ್ರಕರಣಗಳು

ಶ್ರೀ. ಜಿ. ರಾಜುಗೌಡ, (ಹನೂರು).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಳು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿದ್ದ ಸರ್ಕಾರಿ ನೌಕರಿ ಮುಂಬಡ್ತಿಗಳಲ್ಲಿ ಮೀಸಲಾತಿ ಸೌಲಭ್ಯಗಳನ್ನು ಪಡೆದಂತಹ ಪ್ರಕರಣಗಳ ಬಗ್ಗೆ ೧೯೮೬ ರಿಂದ ೧೯೮೮ರ ಮಾರ್ಚಿ ಅಂತ್ಯದವರೆಗೆ ನಾಗರೀಕ ಹಕ್ಕು ಜಾರಿ ಘಟಕಕ್ಕೆ ಬಂದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಎಷ್ಟು ಪ್ರಕರಣಗಳಲ್ಲಿ ವಿಚಾರಣೆ ಪೂರ್ಣಗೊಂಡಿದೆ.

ಇ) ಇದರಲ್ಲಿ ಎಷ್ಟು ಪ್ರಕರಣಗಳು ಸಾಬೀತಾಗಿವೆ ಹಾಗೂ ಸಾಬೀತಾದ ಪ್ರಕರಣಗಳಲ್ಲಿ ಎಷ್ಟು ನೊಕದ್ದೆಮೆಗಳನ್ನು ನೊಂದಾಯಿಸಲಾಗಿದೆ ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನಸೇವಾ ಮತ್ತು ಕ್ರೀಡಾ ಸಚಿವರು).—

ಅ) ೨೮೫

ಆ) ೨೪೯ ಪ್ರಕರಣಗಳಲ್ಲಿ ವಿಚಾರಣೆ ಪೂರ್ಣಗೊಂಡಿದೆ.

ಇ) ೧೩೯ ಪ್ರಕರಣಗಳು ಸಾಬೀತಾಗಿದೆ. ಇದರಲ್ಲಿ ೧೨೨ ಪ್ರಕರಣಗಳಲ್ಲಿ ಮೊಕದ್ದಮ್ಮೆ ನೊಂದಾಯಿಸಲಾಗಿದೆ.

ಮಹಿಳಾ ಅಭಿವೃದ್ಧಿ ನಿಗಮ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೮-೮೯ನೇ ಸಾಲಿನಲ್ಲಿ ಮಹಿಳಾ ಅಭಿವೃದ್ಧಿ ನಿಗಮದವರು ಮಹಿಳೆಯರ ಅಭಿವೃದ್ಧಿಗಾಗಿ ಸಾಲ ಸೌಲಭವನ್ನು ಕೊಡುವುದಕ್ಕಾಗಿ ನಿಗದಿ ಮಾಡಿದ್ದ ಹಣವೆಷ್ಟು.

ಆ) ಸಾಲ ಸೌಲಭ್ಯವನ್ನು ಕೋರಿ ಬಂದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು, ಅವುಗಳಲ್ಲಿ ಎಷ್ಟು ಜನ ಮಹಿಳೆಯರಿಗೆ ಈ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು).

ಇ) ಇನ್ನುಳಿದವರಿಗೆ ಯಾವಾಗ ಈ ಸೌಲಭ್ಯವನ್ನು ಕೊಡಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಪ್ರತ್ಯೇಕ ಹಣವನ್ನು ನಿಗದಿ ಮಾಡಿರುವುದಿಲ್ಲ.

ಆ) ಸಾಲ ಸೌಲಭ್ಯವನ್ನು ಕೊಡುವುದಕ್ಕಾಗಿ ಒಟ್ಟು ೯ ಅರ್ಜಿಗಳು ಬಂದಿವೆ. (ಬೆಂಗಳೂರು ಜಿಲ್ಲೆಯಲ್ಲಿ ೭ ಅರ್ಜಿಗಳು ಕೋಲಾರ ಜಿಲ್ಲೆಯಲ್ಲಿ ೧ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ೧) ಸದರಿಯವು ಅರ್ಜಿಗಳು ಪರಿಶೀಲನೆಯಲ್ಲಿ ಇವೆ.

ಇ) ಉದ್ಭವಿಸುವುದಿಲ್ಲ.

ಬೈಂದೂರು, ಕೊಲ್ಲೂರು ಕುಂದಾಪುರಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ರಚಿಸಂವ ಬಗ್ಗೆ

ಶ್ರೀ ಜಿ.ಎಸ್. ಆಚಾರ್, (ಬೈಂದೂರು).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೈಂದೂರು ಕೊಲ್ಲೂರು, ಕುಂದಾಪುರಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ರಚಿಸುವ ಅಗತ್ಯವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ನಿಲ್ದಾಣಗಳ ರಚನೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಬಂದಿದೆ.

ಆ) ಸೂಕ್ತ ನಿವೇಶನಗಳಿಗಾಗಿ ಅನ್ವೇಷಣೆ ಕಾರ್ಯ ಪ್ರಗತಿಯಲ್ಲಿದೆ, ಕೊಲ್ಲೂರು ಮತ್ತು ಕುಂದಾಪುರ ಬಸ್ ನಿಲ್ದಾಣ ಕಾರ್ಯವನ್ನು ೧೯೮೯–೯೦ರ ಆಯವ್ಯಯದಲ್ಲಿ ಅಳವಡಿಸಲಾಗಿದೆ,

ಹೊಸದುರ್ಗ ಕ್ಷೇತ್ರದಲ್ಲಿ ಅಮೃತ್‌ಮಹಲ್ ಕಾವಲಿನ ವಿಚಾರ

೮೫೦. ಶ್ರೀ ಬಿ. ರಾಮದಾಸ್ (ಹೊಸದುರ್ಗ).—ಪಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹೊಸದುರ್ಗ ಕ್ಷೇತ್ರದಲ್ಲಿ ಯಾವ ಯಾವ ಭಾಗದಲ್ಲಿ ಎಷ್ಟು ಎಕರೆ ಅಮೃತ್ ಮಹಲ್ ಕಾವಲುಗಳಿವೆ.

ಆ) ಕೈನೋಡು ಕಾವಲಿನಲ್ಲಿ ಪರಿಶಿಷ್ಟ ಜಾತಿ ವರ್ಗದವರು ಬಗರು ಹುಕುಂ ಸಾಗುವಳಿ ಮಾಡುತ್ತಿರುವುದು ನಿಜವೇ.

ಇ) ಹಾಗಿದ್ದಲ್ಲಿ ಅದನ್ನು ಖಾಯಂ ಮಾಡಿಕೊಡಲು ಸರ್ಕಾರ ಕ್ರಮವನ್ನೇನಾದರೂ ತೆಗೆದುಕೊಂಡಿದೆಯೇ.

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು) —

ಅ) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ಒಟ್ಟು ೧೦ ಅಮೃತ್ ಮಹಲ್ ಕಾವಲುಗಳು ಈ ಕೆಳಕಂಡ ಜಾಗಗಳಲ್ಲಿ ಸುಮಾರು ೬೭೧೦.೦೦ ಎಕರೆ ಪ್ರದೇಶವನ್ನು ಆವರಿಸಿಕೊಂಡಿದೆ.

		ಎಕರೆಗಳು ಗುಂಟೆಗಳು
೧.	ಅಜ್ಜಿಗುಡ್ಡ	೪೦೨.೦೦
೨.	ಬಲ್ಲಾಳ ಸಮುದ್ರ	೮೩೬.೦೦
೩.	ಚಿಕ್ಕತೇಕಲವಟ್ಟಿ	೩೨.೩೬
೪.	ದೇವಾಪುರ	೫೨೦.೦೦
೫.	ಕೊಂಗವಳ್ಳಿ ತೊರೆ	೭೮೯.೨೯
೬.	ಕ್ಯಾದಿಗೆರೆ	೧೩೨೯.೧೪
೭.	ಕೈನೋಡು	೬೨೮.೦೪
೮.	ನೀರುಗುಂದ	೧೨೩೫.೨೨
೯.	ಸೋಮಸಮುದ್ರ	೩೫೬.೦೦
೧೦.	ಎರಡುಗುಡ್ಡ	೫೮೩.೨೩
	ಒಟ್ಟು	೬೭೧೦.೨೮

ಆ) ಕೈನೋಡು ಅಮೃತ್‌ಮಹಲ್ ಕಾವಲಿನ ಸುಮಾರು ೫೦ ಎಕರೆ ಪ್ರದೇಶದಲ್ಲಿ ದಲಿತರು ಎಂದು ಹೇಳಿಕೊಂಡು ಕೆಲವರು ಆಕ್ರಮಿಸಿರುವ ಗಿಡ ಗಂಟಿಗಳನ್ನು ಕಡಿದು ಬಗರು ಸಾಗುವಳಿ ಮಾಡಲು ಪ್ರಯತ್ನಪಟ್ಟಿರುವುದು ನಿಜ. ಆದರೆ ಅವನ್ನು ಮುಂದುವರೆಯಲು ಅವಕಾಶ ಮಾಡಿಲ್ಲ.

ಇ) ಉದ್ಭವಿಸುವುದಿಲ್ಲ.

ನಗರ ಸಾರಿಗೆ ವ್ಯವಸ್ಥೆ ಬಗ್ಗೆ

೮೫೧. ಶ್ರೀ ಸಿದ್ದನಗೌಡರ್, (ಕಲಘಟಗಿ),—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ನಿಗಮವು ಬೆಂಗಳೂರಿನಲ್ಲಿ ನಗರ ಸಾರಿಗೆಯನ್ನು ಒಂದು ದಿನಕ್ಕೆ ಎಷ್ಟು ಕಿ.ಮಿ.ವರೆಗೆ ಬಸ್ಸುಗಳನ್ನು ಓಡಿಸುವುದು.